ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಯೆಲ್ಲರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಖಾನಹಳ್ಳಿ, ಚನ್ನಪಟ್ಟಣ, ಕ್ಲೋಸ್‌ಪೇಟೆ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ವೈಶಾಖಿ ಪಸಾರೆ ಬಾಬುಗಳನ್ನು 1895—96ನೇ ಸಾಲಿಗೋಸ್ಕರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಆಯಾ ತಾಲ್ಲೂಕು ಆಮಿಲರನ್ನ ಇಟ್ಟುಕೊಂಡು ಈ ಕೆಳಗೆ ಕಂಡ ತಖ್ತೇಲಿ ನಮೂದಿಸುವ ತಾರೀಖಿನಲ್ಲಿ ಆಯಾಯ ಸ್ಥಳದಲ್ಲಿ ಹರಾಜು ಮಾಡಿಸುತ್ತಾರೆ.

2. ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ವೈಕಿ $\frac{1}{4}$ ಡಿಪಾಜಿಟ್ ಹಾಜರ್ಮಾಡಬೇಕು ಬಾಕಿ $\frac{3}{4}$ ಹಿಸ್ಸೆ ಮೊಬಲಗನ್ನು ಹರಾಜು ಮಂಜೂರ್ಮಾಡಿ ಅವಲೆದಾರರಿಂದ ಬರಹ ಮೂಲಕ ನರ್ತಮಾನ ಕೊಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಹಾಜರ್ಮಾಡಬೇಕು ತಪ್ಪಿದರೆ ಬಾಬನ್ನು ಪುನಹ ಹರಾಜು ಮಾಡಿಸಿ ಲುಕ್ಸಾನಿಗೆ ಆವಲೆ ಹರಾಜುದಾರನನ್ನ ಗುರಿಮಾಡುತ್ತೆ.

ನಂಬರು	ಫಾರೆಸ್ಟಿನ ಹೆಸರು	ಹರಾಜು ತಾರೀಖು	ಹರಾಜಾಗತಕ್ಕ ಸ್ಥಳ
1	ಕುಂಬ್ಲಗೋಡು ..	4—5—95	ಬಿಡದಿ
2	ಹುಲ್‌ತಾರು ..	ಡಿಟೋ	ಡಿಟೋ
3	ಹಂದಿಗೊಂದಿ ..	ಡಿಟೋ	ಡಿಟೋ
4	ಆಚಲು ..	ಡಿಟೋ	ಡಿಟೋ
5	ತೆಂಗಿನಕಲ್ ..		
6	ಮಾಕಳಿ ..		
7	ಚಿಕ್ಕ ಮಣ್ಣುಗುಡ್ಡೆ ..	7—5—95	ಚನ್ನಪಟ್ಟಣ
8	ದೊಡ್ಡ ಮಣ್ಣುಗುಡ್ಡೆ ..		
9	ಕೋಳಿರಾಯನದುರ್ಗ ..		
10	ಬಾಣಂತಿವಾರ ..		
11	ಕಬ್ಬಾಳು ಮತ್ತು ಭೀಮನಕರಡಿ ..		
12	ಬಿಳಿಕಲ್ ..	11—5—95	ಕಾರ್ಖಾನಹಳ್ಳಿ
13	ಚೀಲಂದೂಡಿ ಮತ್ತು ಮೂಗೂರು ..		
14	ಬಸವನಬೆಟ್ಟ ..		
15	ರಾಗಿಹಳ್ಳಿ ..		
16	ಸಾವಂದುರ್ಗ ..	22—5—95	ಮಾಗಡಿ
17	ಉಜನಿ ಹುಲ್‌ಕಡಿ ಮತ್ತು ಮಾಕಳಿ ..	27—5—95	ದೊಡ್ಡಬಳ್ಳಾಪುರ

ಯ. ಶೇತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೋಜಣಿ ಖರ್ಚು ಮೊಬಲಗು 338—7—2.

ಮಾಗಡಿ ತಾಲ್ಲೂಕು ಕಚೇರಿಯಿಂದ.

ಸ್ಥಿರಸ್ತಿತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1ನೇ ಮೋಜಣಿ ಖರ್ಚಿನ ಕಂದಾಯದ ಬಾಕೀದಾರರಾದ ಬವರಿಂಗ್‌ಪೇಟೆ ತಾಲ್ಲೂಕು ತಿಮ್ಮಸಂದ್ರ ಗ್ರಾಮದ ಶಾನುಭೋಗ ವೆಂಗಟರಮಣಯ್ಯನ ಮಕ್ಕಳು ಗುಂಡಪ್ಪನವರಿಂದ ಬರಬೇಕಾದ ಜರ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ತು ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಕಾಯಂಗುತ್ತಾ ಯಲಜಗುಪ್ಪೆ ಗ್ರಾಮದಲ್ಲಿ 1895ನೇ ಮೇ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು 22—5—95ನೇ ದಿವಿ 11 ಘಂಟೆಗೆ ಉವಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ಸಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ 338—7—2 ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ವೇರಿಗೆ 338—7—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ ಹಾಜರ್ ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.